# ಏನು ಮೆಚ್ಚಿದೆಲೆ ಹೆಣ್ಣೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 140.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 245.
3. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 105.
4. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 70.
5. **Note:** Lyrics mentioned without highlights are as per Ref. 1. The wordings in Ref. 2 are same as in Ref. 1. The lyrics in Ref. 3 are slightly different and are given in green highlights. The wordings in Ref. 4 are same as in Ref. 3.
6. **Note:** Singer has followed lyrics as in Ref. 1.

ರಾಗ: ಕಾಂಭೋಜ ತಾಳ: ಝಂಪೆ

ಏನು ಮೆಚ್ಚಿದೆಲೆ ಹೆಣ್ಣೆ ಏನು ಮರುಳಾದೆ || ಪ ||

ನೋಟದಿ ಚೆಲುವನಿವನೆಂಬೆನೆ ಚಂಚಲ
ಮಾಟದಿ ಚೆಲುವನಿವನೆಂಬೆನೆ ಬೆನ್ನು ಗುಪ್ಪುಟು
ಗೂಟದಂಥ ಹಲ್ಲು ಮೊಳದುದ್ದದ ಮೋರೆ
ಬೂಟಕತನದಿ ಬಾಯ್ದೆರೆದು ಅಂಜಿಪಗೆ || 1 ||

ಅಣು ರೂಪದವನಿವ ನಿಲುವುಳ್ಳ ನರನಲ್ಲ
ಬನವ ತರಿವವನಂತೆ ಕೈಯಲ್ಲಿ ಕೊಡಲಿ
ಮನುಜರನು ತಾ ಬಿಟ್ಟು ಕಪಿಗಳನು ಕೂಡುವ
ಮನೆ ಮನೆಯನು ಪೊಕ್ಕು ಕದ್ದು ತಿಂಬುವಗೆ || 2 ||

ಗಂಭೀರ ಪುರುಷನಿವನೆಂಬೆನೆ ದಿಗಂಬರ
ಅಂಬರದೊಳಗೆ ಕುದುರೆಯನು ಕುಣಿಸುವ

ಅಂಬುಜಾಕ್ಷ ಸಿರಿ ಪುರಂದರ ವಿಠಲನ
ಸಂಭ್ರಮದಿ ನೀ ಮೆಚ್ಚಿ ಮದುವ್ಯಾದೆಯಲ್ಲೆ || 3 ||

**Note:** The lyrics given below in green highlights are as per Ref. 3.

ರಾಗ: ಕಾಂಭೋಜ ತಾಳ: ಅಟ

ಏನು ಮೆಚ್ಚಿದೆ ಎಲೆ ಹೆಣ್ಣೆ ಏನು ಮರುಳಾದೆಯೆ
ಏನು ಮೆಚ್ಚಿದೆಯೆಲೆ ಹೆಣ್ಣೆ ॥ ಪ ॥

ನೋಟದಿ ಚೆಲುವನೆಂಬೆನೆ ಚಂಚಲರೂಪ
ಮಾಟದಿ ಚೆಲುವನೆ ಬೆನ್ನಲಿ ಬುಗುಟಿ
ಗೂಟದಂತೆ ಹಲ್ಲು ಮೊಳದುದ್ದ ಮೋರೆಯು
ಬೂಟಕತನದಲ್ಲಿ ಬಾಯ ತೆರೆವನಿಗೆ ॥ 1 ॥

ಅಣುರೂಪದವನಿವ ನಿಲುವು ಉಳ್ಳವನಲ್ಲ
ಬನವ ತವರಿವವನಂತೆ ಕೈಯಲಿ ಕೊಡಲಿ
ಅನುಜರ ಬಿಟ್ಟು ಕಪಿಗಳ ಕೂಡಿ ಆಡುವ
ಮನೆಮನೆಗಳ ಪೊಕ್ಕು ಕದ್ದು ತಿಂಬವನಿಗೆ ॥ 2 ॥

ಗಂಭೀರ ಪುರುಷನೆಂಬೆನೆ ದಿಗಂಬರನಿವ
ಅಂಬರದಲಿ ಕುದುರೆ ಕುಣಿಸುವನು
ಅಂಬುಜಾಕ್ಷನಮ್ಮ ಪುರಂದರವಿಠಲಗೆ
ಸಂಭ್ರಮದಿಂದಲಿ ಮರುಳಾದೆ ಹೆಣ್ಣೆ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದು ಲಕ್ಷ್ಮಿದೇವಿಯನ್ನು ಕುರಿತು ಹೇಳಿದಂತೆ, ನಿಂದಾಸ್ತುತಿಯ ರೂಪದಲ್ಲಿರುವ ಪದ. ಮೊದಲ ನುಡಿಯಲ್ಲಿ ಮತ್ಸ್ಯ, ಕೂರ್ಮ, ವರಾಹ, ನರಸಿಂಹ ಈ ರೂಪಗಳ ವರ್ಣನೆ, ಎರಡನೆಯದರಲ್ಲಿ ವಾಮನ, ಪರಶುರಾಮ, ರಾಮ, ಕೃಷ್ಣರ ವರ್ಣನೆ; ಮೂರನೆಯದರಲ್ಲಿ ಬುದ್ಧ, ಕಲ್ಕಿ ಇವರ ವರ್ಣನೆ.

1. **ಚಂಚಲ ರೂಪ** = ಮೀನಾ (ಮತ್ಸ್ಯಾವತಾರ)

**ಬೆನ್ನಲಿ ಗುಬುಟ** = ಆಮೆ (ಕೂರ್ಮಾವತಾರ)

**ಗೂಟದಂತೆ .... ಮೊರೆಯು** = ಮಿಕ (ವರಾಹಾವತಾರ)

**ಬೂಟಕತನ** = ವಂಚನೆ

**ಬಾಯಿತೆರೆವನು** = ಸಿಂಹ (ನಾರಸಿಂಹಾವತಾರ)

2. **ಅಣುರೂಪದವ** = ಗಿಡ್ಡ, ಕುಳ್ಳ (ವಾಮನವತಾರ)

**ನಿಲುವು** = ಎತ್ತರ

**ಬನವ .... ಕೊಡಲಿ** = ಪರಶುರಾಮಾವತಾರ

**ಮನುಜರ ..... ಕಪಿಗಳ** = ರಾಮಾವತಾರ

**ಮನೆ .... ತಿಂಬವನಿಗೆ** = ಕೃಷ್ಣಾವತಾರ

3. **ದಿಗಂಬರನಿವ** = ಬೌದ್ಧಾವತಾರ

**ಅಂಬರದಲಿ ..... ಕುಣಿಸುವನು** = ಕಲ್ಕ್ಯಾವತಾರ

**Classification:** Keerthane
**Ankita:** siri purandara vittala
**Location:** NA
**Category:** Mahatmya Gynana, Dashavatara, Hari Sarvottama, Ninda Stuti
**Sub-Category:** hennu, bayi, bhaya, anu, nara, dashavatara, hari sarvottama, kaadu, kai, koti, mane, kalla, akasha, kudure, Lakshmi, maduve,
**Pravachana:** NA
**Explanation:** NA